**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003**
**KARNATAKA SECONDARY EDUCATION EXAMINATION BOARD, MALLESWARAM, BANGALORE – 560 003**

**ಎಸ್.ಎಸ್.ಎಲ್.ಸಿ. ಪರೀಕ್ಷೆ, ಏಪ್ರಿಲ್, 2012**
**S.S.L.C. EXAMINATION, APRIL, 2012**

**ಮಾದರಿ ಉತ್ತರಗಳು**
# MODEL ANSWERS

ದಿನಾಂಕ : 05. 04. 2012 — **ಸಂಕೇತ ಸಂಖ್ಯೆ : 83-K**

Date : 05. 04. 2012 — **CODE NO. : 83-K**

# ವಿಷಯ : ವಿಜ್ಞಾನ
# Subject : SCIENCE

**( ಭೌತಶಾಸ್ತ್ರ, ರಸಾಯನಶಾಸ್ತ್ರ ಮತ್ತು ಜೀವಶಾಸ್ತ್ರ )**
**( Physics, Chemistry & Biology )**




[ ಪರಮಾವಧಿ ಅಂಕಗಳು : **100**
**[ Max. Marks : 100**

**( Kannada Version )**

| *ಪ್ರಶ್ನೆ ಸಂಖ್ಯೆ* | *ಉತ್ತರದ ಕ್ರಮಾಕ್ಷರ* | *ಪ್ರಶ್ನಾನುಸಾರ ಮೌಲ್ಯಮಾಪನ* | *ಅಂಕಗಳು* |
|---|---|---|---|
| | | ಭಾಗ – ಎ<br>( ಭೌತಶಾಸ್ತ್ರ ಮತ್ತು ರಸಾಯನಶಾಸ್ತ್ರ )<br>( ಅಂಕಗಳು : 65 ) | |
| 1. | C | ವಿಟಮಿನ್ *D* | 1 |
| 2. | A | ಲೇಸರ್ ರೇಂಜಿಂಗ್ | 1 |
| 3. | D | ನಿಷ್ಕಾಸ ಹೊಡೆತ | 1 |
| 4. | C | ಇಂಗಾಲದ ಮೊನಾಕ್ಸೈಡ್ ಹೆಚ್ಚು ಬಿಡುಗಡೆ ಮಾಡುತ್ತದೆ | 1 |
| 5. | C | ಹೃದಯದ ಕಾರ್ಯವನ್ನು ಅಭ್ಯಸಿಸಲು | 1 |
| 6. | A | 2 | 1 |
| 7. | D | ಖಾದ್ಯಯೋಗ್ಯವಲ್ಲದ ವನಸ್ಪತಿ ಎಣ್ಣೆ | 1 |
| 8. | B | ಉದ್ದ ಸರಪಣಿಯ ಹೈಡ್ರೋಕಾರ್ಬನ್, ಸೋಡಿಯಂ ಹೈಡ್ರಾಕ್ಸೈಡ್, ಸಲ್ಫೂರಿಕ್ ಆಮ್ಲ | 1 |
| 9. | D | ನೇರಳಾತೀತ ಕಿರಣಗಳು | 1 |
| 10. | D | ಹೀರುವಿಕೆಯ ವಿಸ್ತೀರ್ಣವನ್ನು ಹೆಚ್ಚಿಸುತ್ತದೆ | 1 |

[ Turn over



| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು | |
|---|---|---|---|
| 11. | ಅಗತ್ಯವಾದ ಕೇಂದ್ರಾಭಿಮುಖ ಪಡೆಯಲು ಓಟಗಾರನು ತಿರುವು ಪಥದಲ್ಲಿ ಓಡುವಾಗ ತಿರುವಿನ ಕೇಂದ್ರದೆಡೆಗೆ ಯುಕ್ತವಾಗಿ ಓರೆ ಮಾಡುತ್ತಾ ಓಡುತ್ತಾನೆ. | 1 | |
| 12. | ಮಿಶ್ರಣದಲ್ಲಿ ಉಸುಕು ಭಾರವಾಗಿರುತ್ತದೆ ಮತ್ತು ಹೆಚ್ಚಿನ ಕೇಂದ್ರತ್ಯಾಗಿ ಬಲವನ್ನು ಅನುಭವಿಸುತ್ತದೆ. | 1 | |
| 13. | i) ಸೌರ ದೀಪ | | |
| | ii) ರಸ್ತೆ ದೀಪ | | |
| | iii) ಕೃತಕ ಉಪಗ್ರಹ | | |
| | (ಯಾವುದೇ ಸೂಕ್ತವಾದ ಎರಡು ಉತ್ತರ) | $\frac{1}{2}+\frac{1}{2}$ | 1 |
| 14. | — ಸೂರ್ಯನ ಅಂತರಾಳದಿಂದ ಹೊಮ್ಮುವ ಶಕ್ತಿಯು ತೇಜೋಮಂಡಲದ ಸೌರಕಲೆಗಳಿರುವ ಭಾಗವನ್ನು ತಲುಪಲಾರವು. ಆದ್ದರಿಂದ ಸೌರಕಲೆಗಳು ಮುಸುಕಾಗಿ ಕಾಣುತ್ತವೆ. | 1 | |
| | ಅಥವಾ | | |
| | — ಉಳಿದ ಭಾಗಗಳಿಗೆ ಹೋಲಿಸಿದಾಗ ಸೌರಕಲೆಗಳು ಕಡಿಮೆ ಉಷ್ಣತೆ ಹೊಂದಿರುವುದರಿಂದ. | 1 | |
| 15. | ಅಡುಗೆ ಮಾಡುವ ವೇಳೆ ಉಳಿಯುತ್ತದೆ ಮತ್ತು ಇಂಧನ ದಹನವಾಗುವಿಕೆಯ ಪ್ರಮಾಣ ಕೂಡ ಕಡಿಮೆಯಾಗುತ್ತದೆ. | 1 | |
| 16. | — ಪರ್ಮ್ಯುಟಿಟ್ ವಿಧಾನವು ಸೀಸ, ಮ್ಯಾಂಗನೀಸ್ ಮತ್ತು ಕಬ್ಬಿಣದ ಲವಣಗಳನ್ನು ತೆಗೆಯಲಾರದು. | | |
| | — ನೀರು ಹೆಚ್ಚಾದ ಸೋಡಿಯಂ ಲವಣ ಹೊಂದಿರುತ್ತದೆ. (ಯಾವುದಾದರೂ ಒಂದು) | 1 | |
| 17. | ಹೊಂದಿಸಿ ಬರೆಯುವುದು. | | |
| | ***ಪಟ್ಟಿ – A*** ***ಪಟ್ಟಿ – B*** | | |
| | a) ಪ್ರೊಪೇನ್ iv) $C_3H_8$ | 1 | |
| | b) ಅಸಿಟಿಲಿನ್ vii) $C_2H_2$ | 1 | |
| | c) ಈಥೇನ್ i) $C_2H_6$ | 1 | |
| | d) ಬ್ಯೂಟೈನ್ iii) $C_4H_6$ | 1 | 4 |
| 18. | 3 | 1 | |
| 19. | ಡಾಪ್ಲರ್ ಪರಿಣಾಮ | 1 | |
| 20. | ಅನಿಲನ ( Annealing ) | 1 | |
| 21. | ಮೋಟಾರ್ ಮತ್ತು ಡೈನಮೋದಲ್ಲಿಯ ಸಾಮಾನ್ಯ ಭಾಗಗಳು | | |
| | i) ಕಾಂತ ಧ್ರುವಗಳು | 1 | |
| | ii) ಆರ್ಮೇಚರ್ | 1 | 2 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು | |
|---|---|---|---|
| 22. | ಡಿ.ಸಿ. ಮೋಟಾರ್ :  | | 2 |
| 23. | i) ತತ್‌ಕ್ಷಣ ಜರುಗುವ ಕ್ರಿಯೆ<br>ii) ಇದು ಮೇಲ್ಮೈ ವಿದ್ಯಮಾನ<br>iii) ದ್ಯುತಿ ವಿದ್ಯುತ್ ಪರಿಣಾಮ ಉಂಟು ಮಾಡುವ ವಿಕಿರಣಕ್ಕೆ ನಿರ್ಣಾಯಕ ಆವೃತ್ತಿ ಇದ್ದು, ನಿರ್ಣಾಯಕ ಆವೃತ್ತಿಗಿಂತ ಕಡಿಮೆ ಆವೃತ್ತಿ ಇದ್ದರೆ ದ್ಯುತಿ ವಿದ್ಯುತ್ ಪರಿಣಾಮ ನಡೆಯಲಾರದು.<br>iv) ಫೋಟೋ ಇಲೆಕ್ಟ್ರಾನ್‌ಗಳ ಸಂಖ್ಯೆಯು ತೀವ್ರತೆಗೆ ನೇರ ಅನುಪಾತದಲ್ಲಿರುತ್ತದೆ.<br>v) ಫೋಟೋ ಇಲೆಕ್ಟ್ರಾನ್‌ಗಳ ಚಲನಶಕ್ತಿಯು ಆವೃತ್ತಿಗೆ ನೇರ ಅನುಪಾತದಲ್ಲಿರುತ್ತದೆ. | 1 + 1 | 2 |
| 24. |  | | 2 |
| 25. |  | | 2 |




[ Turn over

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು | |
|---|---|---|---|
| 26. | — ಅಲ್ಯುಮಿನಿಯಂ ಕ್ಲೋರೈಡ್ | 1 | |
| | — $2Al + 3Cl_2 \rightarrow 2AlCl_3$ | 1 | 2 |
| 27. | a) ಸಿಲಿಕಾನ್ ಮತ್ತು ಕೋಕ್‌ನ ಮಿಶ್ರಣವನ್ನು ವಿದ್ಯುತ್ ಕುಲುಮೆಯಲ್ಲಿ ಸುಮಾರು 3073 K ಗೆ ಕಾಯಿಸಿದಾಗ ಸಿಲಿಕಾನ್ ಕಾರ್ಬೈಡ್ ದೊರೆಯುತ್ತದೆ. | | |
| | $Si + C \rightarrow SiC$ | 1 | |
| | b) ಸಿಲಿಕಾನ್ ಮತ್ತು ನೀರಿನಿಂದ ನಾವು ಹೈಡ್ರೋಜನ್ ಅನಿಲವನ್ನು ಈ ಕೆಳಗಿನಂತೆ ಪಡೆಯಬಹುದು.<br>ಸಿಲಿಕಾನ್ ನೀರಿನೊಂದಿಗೆ ವರ್ತಿಸುವುದಿಲ್ಲ. ಆದರೆ ಕಾಯ್ದ ಸಿಲಿಕಾನ್ ನೀರಾವಿಯನ್ನು ವಿಭಜಿಸಿ ಹೈಡ್ರೋಜನ್‌ನ್ನು ಬಿಡುಗಡೆ ಮಾಡುತ್ತದೆ.<br>ಅಥವಾ<br>$Si + 2H_2O \rightarrow SiO_2 + 2H_2$ | 1 | 2 |
| | (ಕೆಂಗಾವು) + (ಹಬೆ) | | |
| 28. | ***ಥರ್ಮೋಸೆಟ್ಟಿಂಗ್ ಪ್ಲಾಸ್ಟಿಕ್*** — ***ಥರ್ಮೋಪ್ಲಾಸ್ಟಿಕ್‌ಗಳು*** | | |
| | a) ಕಾಯಿಸಿದಾಗ ಮೃದುವಾಗಲಾರದು — i) ಕಾಯಿಸಿದಾಗ ಮೃದು ಆಗುತ್ತದೆ | | |
| | b) ಮರುಬಳಕೆ ಮಾಡಲಾಗದು — ii) ಮರುಬಳಕೆ ಮಾಡಬಹುದು | | |
| | c) ನಾವು ಅದಕ್ಕೆ ಅಚ್ಚುಹಾಕಿ ಆಕಾರ ಕೊಡಲಾಗದು — iii) ನಾವು ಅದಕ್ಕೆ ಆಕಾರ ಕೊಡಬಹುದು | | |
| | (ಯಾವುದಾದರೂ ಎರಡು) | 1 + 1 | 2 |
| 29. | — ನೀರು ಸಾಬೂನಿನೊಂದಿಗೆ ಸರಾಗವಾಗಿ ನೊರೆ ಕೊಡದಿದ್ದಲ್ಲಿ ಅಂತಹ ನೀರು ಗಡಸು ನೀರು. | 1 | |
| | — ಮ್ಯಾಗ್ನೆಶಿಯಂ ಬೈಕಾರ್ಬೋನೇಟ್ ಮತ್ತು ಕ್ಯಾಲ್ಸಿಯಂ ಬೈಕಾರ್ಬೋನೇಟ್. | 1 | 2 |
| 30. | *ಕೆಪ್ಲರನ ಮೊದಲ ನಿಯಮ :* ಒಂದು ಕೇಂದ್ರದಲ್ಲಿರುವ ಎಲಿಪ್ಸೀಯ ಕಕ್ಷೆಗಳಲ್ಲಿ ಗ್ರಹಗಳು ಸೂರ್ಯನ ಸುತ್ತ ಚಲಿಸುತ್ತವೆ. | 1 | |
| | *ಕೆಪ್ಲರನ ಎರಡನೆ ನಿಯಮ :* ಸೂರ್ಯನಿಂದ ಗ್ರಹಕ್ಕೆ ಎಳೆದ ಕಲ್ಪನಾ ರೇಖೆಯು ಸಮಾನ ಕಾಲಾವಧಿಗಳಲ್ಲಿ ಸಮಾನ ಕ್ಷೇತ್ರವನ್ನು ಕ್ರಮಿಸುವಂತೆ ಗ್ರಹಗಳು ಚಲಿಸುತ್ತವೆ. | 1 | |
| | *ಕೆಪ್ಲರನ ಮೂರನೆ ನಿಯಮ :* ಸೂರ್ಯನಿಂದ ಗ್ರಹಕ್ಕಿರುವ ಸರಾಸರಿ ದೂರದ ಘನವು ಅದರ ಪರಿಭ್ರಮಣ ಅವಧಿಯ ವರ್ಗಕ್ಕೆ ಅನುಪಾತೀಯವಾಗಿರುತ್ತದೆ. $\left(r^3 \alpha T^3\right)$ | 1 | 3 |
| 31. | a) ರೇಡಿಯೋ-ಕಾರ್ಬನ್ ಬಳಸಿ ಮರದ ಅರ್ಧಾಯುಷ್ಯ ಕಂಡುಹಿಡಿಯಬಹುದು. | 1 | |
| | b) 12 ನಿಮಿಷಗಳು $= \frac{12}{3} = 4$ ಅರ್ಧಾಯುಷ್ಯಗಳು<br>$\frac{N}{2}$<br>$\frac{N}{4}$<br>$\frac{N}{8} = 2$<br>$\frac{N}{16} = 2 \quad \therefore N = 32.$ | 2 | 3 |
| | (ಈ ಲೆಕ್ಕಾಚಾರವನ್ನು ಸರಿಹೊಂದುವ ಬೇರೆ ರೀತಿಯಲ್ಲಿ ಬಿಡಿಸಿದರೂ ಪರಿಗಣಿಸಿ ಮತ್ತು ಕೇವಲ ಉತ್ತರ ಬರೆದರೂ ಪರಿಗಣಿಸಿ) | | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು | |
|---|---|---|---|
| 32. | — ಆಶ್ರಗವನ್ನು ಬಳಸಿ ಸಂಕೀರ್ಣ ಬೆಳಕಿನಿಂದ ಶುದ್ಧ ರೋಹಿತವನ್ನು ಪಡೆಯಲು ಉಪಯೋಗಿಸುವ ಉಪಕರಣವೇ ರೋಹಿತ ದರ್ಶಕ. | 1 | |
| | — *ಸಮಾಂತರದ ಕಾರ್ಯ :* ಸೀಳುಗಂಡಿಯಿಂದ ಬರುವ ಬೆಳಕನ್ನು ನೇರ ಮತ್ತು ಸಮಾನಾಂತರ ಕಿರಣಗಳಾಗಿ ಸಮಾಂತರವು ಪರಿವರ್ತಿಸುತ್ತದೆ. | 1 | |
| | — *ದೂರದರ್ಶಕದ ಕಾರ್ಯ :* ವರ್ಧನೆಗೊಂಡ ಮತ್ತು ಸ್ಪಷ್ಟವಾದ ಪ್ರತಿಬಿಂಬ ಪಡೆಯಲು. | 1 | 3 |
| 33. |  ಪೂರ್ಣ ಚಿತ್ರಕ್ಕೆ | 2 | |
| | ಗುರುತಿಸಿದ್ದಕ್ಕೆ | 1 | 3 |
| 34. | a) ವೃತ್ತಾಕಾರದ ಪಥದಲ್ಲಿ ಚಲಿಸುತ್ತಿರುವ ಕಾಯದ ವೇಗಕ್ಕೆ ಕಕ್ಷಾವೇಗ ಎನ್ನುತ್ತಾರೆ. | 1 | |
| | b) $V_0 = \sqrt{\frac{GM_E}{(R+h)}}$ <br> $V_0$ = ಕಕ್ಷಾವೇಗ <br> $M_E$ = ಭೂಮಿಯ ರಾಶಿ <br> $G$ = ಗುರುತ್ವ ಸ್ಥಿರಾಂಕ <br> $R$ = ಭೂಮಿಯ ತ್ರಿಜ್ಯ <br> $h$ = ಭೂಮಿಯ ಮೇಲ್ಮೈಯಿಂದ ಕಾಯಕ್ಕಿರುವ ದೂರ | 2 | |
| | c) $V_e = \sqrt{2}\ .\ V_0$ . | 1 | 4 |
| 35. | i) *ಆದಿ ನಕ್ಷತ್ರ :* | | |
| | — ಜಲಜನಕ ಮತ್ತು ಹೀಲಿಯಂ ಅನಿಲಗಳ ಸಂಚಯದಿಂದ ಆರಂಭವಾಗುತ್ತದೆ. ಇದು ಮಿಲಿಯಾಂತರ ವರ್ಷಗಳವರೆಗೆ ಮುಂದುವರಿಯುತ್ತದೆ. | $\frac{1}{2}$ | |
| | — ಸಂಚಯವು ಸಾಕಷ್ಟು ಜಾಸ್ತಿಯಾದಾಗ ಅನಿಲಗಳು ತಮ್ಮದೇ ಗುರುತ್ವದಿಂದ ಕುಗ್ಗುತ್ತದೆ. | 1 | |
| | — ಸಾಂದ್ರ ಅನಿಲ ವಸ್ತುಗಳ ಸಂಪೀಡನೆಯಿಂದ ರೂಪಗೊಳ್ಳುವ ಗೋಲವೇ ಆದಿ ನಕ್ಷತ್ರ <br>  | $\frac{1}{2}$ | |

[ Turn over


| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು | |
|---|---|---|---|
| | ii) *ಸ್ಥಿರಸ್ಥಿತಿ ನಕ್ಷತ್ರ :* | | |
| | — ಆದಿನಕ್ಷತ್ರದಲ್ಲಿ ಗುರುತ್ವಾಕರ್ಷಣೆ ಸಂಪೀಡನೆಯಿಂದ ಪರಮಾಣುಗಳು ಪರಸ್ಪರ ಡಿಕ್ಕಿ ಹೊಡೆಯುತ್ತವೆ. | $\frac{1}{2}$ | |
| | — ಪರಮಾಣುಗಳ ಚಲನಶಕ್ತಿ ಮತ್ತು ನಕ್ಷತ್ರದ ಉಷ್ಣತೆ ನಿಧಾನವಾಗಿ ಹೆಚ್ಚುತ್ತದೆ. | $\frac{1}{2}$ | |
| | — ಉಷ್ಣತೆಯು ಒಂದು ಮಿಲಿಯನ್ ಡಿಗ್ರಿ ಸೆಂಟಿಗ್ರೇಡ್‌ನಿಂದಲೂ ಹೆಚ್ಚಾದಾಗ ಉಷ್ಣ ಸಮ್ಮಿಲನ ಕ್ರಿಯೆ ಆರಂಭವಾಗುತ್ತದೆ. ಜಲಜನಕದ ಬೀಜ ಸಮ್ಮಿಲನದಿಂದ ಹೀಲಿಯಂ ಆಗುತ್ತದೆ. | $\frac{1}{2}$ | |
| | — ಗುರುತ್ವದ ಒಳಸೆಳೆತ ಮತ್ತು ಹೊರ ಬೈಜಿಕ ಬಲವು ಸಮವಾಗುತ್ತದೆ. ಈಗ ನಕ್ಷತ್ರವು ಸ್ಥಿರಸ್ಥಿತಿಯ ನಕ್ಷತ್ರವಾಗಿರುತ್ತದೆ. | $\frac{1}{2}$ | 4 |



*ಸೂಚನೆ :* ವಿದ್ಯಾರ್ಥಿಗಳು ಉತ್ತರಗಳನ್ನು ಸ್ವಂತಿಕೆಯಿಂದಲೂ ಉತ್ತರಿಸಬಹುದು.

ಚಿತ್ರವೊಂದನ್ನೆ ಬಿಡಿಸಿದರೆ 1 ಅಂಕ ಕೊಡಬಹುದು.

36. ಊದು ಕುಲುಮೆಯ ಚಿತ್ರ :



| | | | |
|---|---|---|---|
| | ಪೂರ್ಣ ಚಿತ್ರಕ್ಕೆ | $2\frac{1}{2}$ | |
| | ಯಾವುದಾದರೂ 3 ಭಾಗ ಗುರುತಿಸುವಿಕೆ | $1\frac{1}{2}$ | 4 |

| ಪ್ರಶ್ನೆ ಸಂಖ್ಯೆ | ಉತ್ತರದ ಕ್ರಮಾಕ್ಷರ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು | |
|---|---|---|---|---|
| | | **ಭಾಗ – ಬಿ** <br> **( ಜೀವಶಾಸ್ತ್ರ )** <br> **( ಅಂಕಗಳು : 35 )** | | |
| 37. | B | ಎಕ್ಸೋಕಾರ್ಪಸ್ | 1 | |
| 38. | A | ಡಿ.ಎನ್.ಎ. ಬೆರಳಚ್ಚು ತಂತ್ರಜ್ಞಾನ | 1 | |
| 39. | B | ಲ್ಯಾಂಗರ್‌ಹ್ಯಾನ್ಸ್‌ನ ಕಿರು ದ್ವೀಪಗಳು | 1 | |
| 40. | A | ಉಸಿರಾಟ | 1 | |
| 41. | D | ಮಹಾಮಸ್ತಿಷ್ಕ | 1 | |
| 42. | | ***A*** — ***B*** | | |
| | a) | ಹಾವು — vii) ಮೂರು ಕೋಣೆಗಳ ಹೃದಯ, ಅಂಡಾಯುಜ, ಶೀತರಕ್ತ ಪ್ರಾಣಿ | 1 | |
| | b) | ಕಡಲು ಕುದುರೆ — iv) ಎರಡು ಕೋಣೆಗಳ ಹೃದಯ, ಅಂಡಾಯುಜ, ಶೀತರಕ್ತ ಪ್ರಾಣಿ | 1 | |
| | c) | ಮೊಲ — i) ನಾಲ್ಕು ಕೋಣೆಗಳ ಹೃದಯ, ಜರಾಯುಜ, ಬಿಸಿರಕ್ತ ಪ್ರಾಣಿ | 1 | |
| | d) | ಕಾಗೆ — iii) ನಾಲ್ಕು ಕೋಣೆಗಳ ಹೃದಯ, ಅಂಡಾಯುಜ, ಬಿಸಿರಕ್ತ ಪ್ರಾಣಿ | 1 | |
| 43. | | ಜೈವಿಕ ಕಾರ್ಯವಿಧಾನಗಳನ್ನು ಬಳಸಿಕೊಳ್ಳುವ ವಿಜ್ಞಾನವೇ ಜೈವಿಕ ತಂತ್ರಜ್ಞಾನ. | 1 | |
| 44. | | ಬಣ್ಣ ಬಣ್ಣದ ಐಸ್‌ಕ್ಯಾಂಡಿಗಳಲ್ಲಿ ಅನುಮತಿ ಇಲ್ಲದ ಬಣ್ಣಗಳನ್ನು ಬಳಸಿರಬಹುದು. ಇವು ಆರೋಗ್ಯಕ್ಕೆ ಹಾನಿ ಉಂಟು ಮಾಡಬಲ್ಲವು. ಆದ್ದರಿಂದ ಬೀದಿ ಬದಿಗಳಲ್ಲಿ ಮಾರುವ ಬಣ್ಣ ಬಣ್ಣದ ಐಸ್‌ಕ್ಯಾಂಡಿಗಳನ್ನು ತಿನ್ನಬಾರದು. | 1 | |
| 45. | | ಅನುಕರಣೆಯ ಮೂಲಕ ಮಗು ಭಾಷೆಯನ್ನು ಕಲಿಯುತ್ತದೆ. ಕಿವುಡಾಗಿರುವ ಮಗುವಿಗೆ ಶಬ್ದಗಳು ಕೇಳದೇ ಇರುವಾಗ ಅದನ್ನು ಅನುಕರಣೆ ಮಾಡಲು ಆಗುವುದಿಲ್ಲ, ಹಾಗಾಗಿ ಅದು ಮೂಕನಾಗಿರಲೂ ಬಹುದು ಅಥವಾ ಮೆದುಳು ಮತ್ತು ಕಿವಿಯ ನಡುವೆ ಸಹಕಾರ ಇಲ್ಲದಿದ್ದರೆ. | 1 | |
| 46. | | ಮಧುಮೇಹ ರೋಗಿಯಲ್ಲಿ ಅಡಿಪೋಸ್ ಅಂಗಾಂಶದಲ್ಲಿನ ಕೊಬ್ಬಿನಾಂಶವು ಉತ್ಕರ್ಷಣೆಗೊಂಡು ಶಕ್ತಿ ಬಿಡುಗಡೆಯಾಗುತ್ತದೆ. ಆದ್ದರಿಂದ ಅವನು ಸಣ್ಣಗಾಗುತ್ತಾನೆ. ಹಾಗಾಗಿ ಅವನಲ್ಲಿ ಚಳಿ ತಡೆದುಕೊಳ್ಳುವ ಶಕ್ತಿ ಕಡಿಮೆಯಾಗುತ್ತದೆ. | 1 | |
| 47. | | ಅಶ್ರು (ಕಣ್ಣೀರು) ಕಣ್ಣನ್ನು ಒದ್ದೆಯಾಗಿಡುತ್ತದೆ. <br> ಕಣ್ಣೀರು ಪೂತಿನಾಶಕದಂತೆ ಕಾರ್ಯನಿರ್ವಹಿಸಿ ಕಣ್ಣಿನಲ್ಲಿರುವ ಸೂಕ್ಷ್ಮಾಣುಜೀವಿಗಳನ್ನು ಕೊಲ್ಲುತ್ತದೆ. | 1 + 1 | |
| 48. | a) | ಜೇನುತುಪ್ಪ — ಬೆಲ್ಲದ ಪಾಕ / ಸಕ್ಕರೆಯ ದ್ರಾವಣ | $\frac{1}{2}$ | |
| | b) | ಅರಿಶಿನದ ಪುಡಿ — ಮೆಟಾನಿಲ್ ಹಳದಿ | $\frac{1}{2}$ | |
| | c) | ಕಾಫಿ ಪುಡಿ — ಹುಣಸೆಬೀಜದ ಪುಡಿ | $\frac{1}{2}$ | |
| | d) | ಮೆಣಸು — ಒಣಗಿದ ಪರಂಗಿ ಬೀಜ | $\frac{1}{2}$ | 2 |
| 49. | a) | ಚಯಾಪಚಯ ದರ ಕಡಿಮೆಯಾಗುವುದು | $\frac{1}{2}$ | |
| | b) | ದೈಹಿಕ ಮತ್ತು ಮಾನಸಿಕ ಶಕ್ತಿ ಕುಂದುವಿಕೆ | $\frac{1}{2}$ | |
| | c) | ದೇಹದ ತೂಕ ಹೆಚ್ಚಾಗುವುದು | $\frac{1}{2}$ | |
| | d) | ಚರ್ಮ ದಪ್ಪವಾಗುವುದು | $\frac{1}{2}$ | |
| | e) | ಹೃದಯ ಬಡಿತ ದರ ಕಡಿಮೆಯಾಗುವುದು (ಯಾವುದಾದರೂ ನಾಲ್ಕು) | $\frac{1}{2}$ | 2 |


[ Turn over

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು | |
|---|---|---|---|
| 50. | (see table below) | | |

| ಅನಿಲದ ಚಕ್ರ | ಚರಟದ ಚಕ್ರ | | |
|---|---|---|---|
| * ಸಂಗ್ರಹ ಮೂಲವು ಸಾಮಾನ್ಯವಾಗಿ ವಾತಾವರಣ ಅಥವಾ ಜಲಾವರಣವಾಗಿರುತ್ತದೆ. | * ಸಂಗ್ರಹ ಮೂಲವು ಸಾಮಾನ್ಯವಾಗಿ ಶಿಲಾವರಣವಾಗಿರುತ್ತದೆ. | 1 | |
| * ಇವು ಪರಿಪೂರ್ಣ ಚಕ್ರಗಳು | * ಇವು ಅಪರಿಪೂರ್ಣ ಚಕ್ರಗಳು | 1 | 2 |


| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು | |
|---|---|---|---|
| 51. | a) ಜನಿಸಿದ ಮರಿಗಳ ಉಳಿವಿನ ಸಾಧ್ಯತೆ ಮೊಟ್ಟೆಗಳ ಉಳಿವಿನ ಸಾಧ್ಯತೆಗಿಂತಲೂ ಹೆಚ್ಚು. | 1 | |
| | b) ಮೊಟ್ಟೆಗಳನ್ನು ರಕ್ಷಿಸಿ, ಮರಿ ಮಾಡಿ, ಅವುಗಳನ್ನು ಪೋಷಿಸುವುದಕ್ಕಿಂತಲೂ, ಜನಿಸಿದ ಮರಿಗಳನ್ನು ರಕ್ಷಿಸಿ ಪೋಷಿಸುವುದು ಸುಲಭ. | 1 | 2 |
| 52. | ನಗರದ ಜನನಿಬಿಡ ಪ್ರದೇಶದಲ್ಲಿ ವಾಸಿಸುವ ವ್ಯಕ್ತಿಯು ವಾಯು ಮಾಲಿನ್ಯದ ದುಷ್ಪರಿಣಾಮಕ್ಕೆ ತುತ್ತಾಗಬಹುದು. ಆತನಿಗೆ ಬ್ರಾಂಕೈಟಿಸ್, ಅಲರ್ಜಿ, ಚರ್ಮತುರಿಕೆ, ಕಣ್ಣಿನ ತುರಿಕೆಯಂತಹ ತೊಂದರೆಗಳು ಉಂಟಾಗಬಹುದು, ಆದ್ದರಿಂದ ವೈದ್ಯರು ಅವನ ವಾಸಸ್ಥಳವನ್ನು ಬದಲಾಯಿಸಲು ಸೂಚಿಸಿರಬಹುದು. | | 2 |
| 53. | a) ಹೊರಚರ್ಮದ ಜೀವಕೋಶಗಳು ಒಂದೇ ರೀತಿಯ ಜೀವಕೋಶಗಳಿಂದ ಕೂಡಿದ್ದು ಅವು ರಚನೆ ಮತ್ತು ಕಾರ್ಯಗಳಲ್ಲಿ ಒಂದೇ ರೀತಿ ಇರುತ್ತದೆ. | 1 | |
| | b) ಕೀಟ ಭಕ್ಷಕ ಸಸ್ಯಗಳು, ಸಾರಜನಕ (ನೈಟ್ರೋಜನ್) ಕಡಿಮೆ ಇರುವ ಮಣ್ಣಿನಲ್ಲಿ ಬೆಳೆಯುತ್ತವೆ, ಆದ್ದರಿಂದ ಅವು ಕೀಟಗಳನ್ನು ಭಕ್ಷಿಸಿ ಅವುಗಳಲ್ಲಿರುವ ಸಾರಜನಕವನ್ನು ಉಪಯೋಗಿಸಿ ಕೊಳ್ಳುತ್ತವೆ. ಇಂತಹ ಮಣ್ಣಿನಲ್ಲಿ ಬೆಳೆಗಳು ಸರಿಯಾಗಿ ಬೆಳೆಯುವುದಿಲ್ಲ. | 2 | 3 |

54. ಹೆಚ್.ಐ.ವಿ. ( HIV ) ರಚನೆಯ ಚಿತ್ರ :




(ಯಾವುದಾದರೂ ಎರಡು ಭಾಗಗಳನ್ನು ಗುರುತಿಸುವುದು) — 2 + 1 | 3

55. ಮಾನವನ ಮೆದುಳಿನ ನೀಳ ಛೇದ ನೋಟದ ಚಿತ್ರ :




2 + 2 | 4